**International Journal of Academic Research** P-ISSN: 2348-7666: Impact Factor: 6.023
This work is licensed under a Creative Commons Attribution 4.0 International License [CC BY 4.0]
Homepage: https://www.ijar.org.in/
Volume-12, Issue-3, July-Sep-2025

**Research Article**

# ಮರುಭೂಮಿಯ ಹೂವು – ಮಹಿಳೆಯ ನೋವು

**Dr. MUNIRAJA A.**
Asst. Professor, Dept. of Languages-Kannada, Madras Christian College, Tambaram, Chennai

ಪ್ರಸಿದ್ಧ ರೂಪದರ್ಶಿಯೊಬ್ಬರ ಆತ್ಮಕಥನವಾದ 'ಮರುಭೂಮಿಯ ಹೂ' ಕೃತಿಯು Waris Dirie (ವಾರಿಸ್ ಡಿರಿ)ಯವರ ಇಂಗ್ಲೀಷ್ ಮೂಲದ Desert Flower ಕೃತಿಯ ಕನ್ನಡಾನುವಾದವಾಗಿದೆ. ಡಾ. ಎನ್. ಜಗದೀಶ್ ಕೊಪ್ಪರವರು ಈ ಕೃತಿಯನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಆಫ್ರಿಕಾದಂತಹ ಕಡುಬಡತನದ ರಾಷ್ಟ್ರಗಳಲ್ಲಿನ ಅಜ್ಞಾನ, ಬಡತನ, ಮೌಢ್ಯ, ಅನಕ್ಷರತೆ, ಲಿಂಗ ತಾರತಮ್ಯ, ಪುರುಷಾಹಂಕಾರ ಮುಂತಾದವುಗಳು ಹೆಣ್ಣೆಂಬ ಜೀವಿಯನ್ನು ನಡೆಸಿಕೊಳ್ಳುವ ರೀತಿ ಮನಕಲಕುತ್ತದೆ. ಮನುಕುಲವೇ ತಲೆತಗ್ಗಿಸುವಂತಹ 'ಯೋನಿ ವಿಚ್ಛೇದನ' ಎಂಬ ಪ್ರಕ್ರಿಯೆಯ ಬಗ್ಗೆ ಸೋಮಾಲಿಯಾದಂತಹ ಮರುಳುಗಾಡಿನ ಪ್ರದೇಶದಲ್ಲಿ ಪ್ರಚಲಿತವಿದ್ದ ಸಂಪ್ರದಾಯವನ್ನು ವಿವರಿಸುತ್ತಾರೆ ಲೇಖಕರು. 'ಪವಿತ್ರತೆ' ಎನ್ನುವ ವ್ಯಾಧಿಯು ಮನುಷ್ಯನನ್ನು ಹೊಕ್ಕಿದರೆ ಅದು ಯಾವ ಮಟ್ಟಿಗಿನ ಕ್ರೂರತೆಯನ್ನು ತೋರುತ್ತದೆ ಎನ್ನುವುದಕ್ಕೆ ಇದು ಪ್ರಚಂಡ ಉದಾಹರಣೆ. ಹೆಣ್ಣೊಬ್ಬಳ ಶಾರೀರಿಕ ಸಂಬಂಧವನ್ನು ಬಯಸುವ ಗಂಡು ಅದರಲ್ಲಿ ಶ್ರೇಷ್ಠತೆಯನ್ನು ಹುಡುಕುವ ಹಾದಿಯಲ್ಲಿನ ಏಳುಬೀಳುಗಳು, ನೋವು–ಸಂಕಟಗಳು ಇಲ್ಲಿ ನಮ್ಮ ಕಣ್ಣಿಗೆ ಕಟ್ಟುತ್ತವೆ. ಅಲೆಮಾರಿ ಜನಾಂಗದಿಂದ ಆಗಸದೆತ್ತರಕ್ಕೆ ಬೆಳೆದ ಈ ರೂಪದರ್ಶಿಯ ಬದುಕು ಮುಳ್ಳಿನ ಹಾದಿಯಾಗಿತ್ತು. ತನ್ನದಲ್ಲದ ತಪ್ಪಿಗೆ ಅವಳು ಅನುಭವಿಸುವ ಕಷ್ಟಗಳು ಅಷ್ಟಿಷ್ಟಲ್ಲ. ಇಂಗ್ಲೆಂಡ್‌ನಂತಹ ಮಹಾನಗರದಲ್ಲಿ ಒಂಟಿಯಾಗಿ ತಾನು ಬದುಕು ನಡೆಸುವುದು; ಎದುರಿಸುವ ಭಾಷಾ ಗೊಂದಲ, ಪಾಸ್‌ಪೋರ್ಟ್‌ಗಾಗಿ ಕೆಲಸಗಾರನಿಂದ ಆಗುವ ತೊಂದರೆ ಇವೆಲ್ಲವುಗಳನ್ನು ಮೆಟ್ಟಿನಿಂತು ತಾನು ಸಾಧಿಸುವ ವಿಜಯವು ಮಾತ್ರ ಹೂವಿನ ಅಂದ, ಸುವಾಸನೆಯಂತೆ ಎಲ್ಲರನ್ನೂ ಆಕರ್ಷಿಸಿತು.

**ಪ್ರಮುಖ ಪದಗಳು (Key words)**
1. ಯೋನಿ ವಿಚ್ಛೇದನ 2. ಮೊಗದಿಶು ನಗರ
3. ಬೊಸ್‌ವೆಲ್ಲಿ 4. ಪ್ಯಾಷನ್ ಪೋಟೋಗ್ರಫಿ
5. ಟೆಲಿಪೋನ್‌ಬೂತ್

ಹೆಣ್ಣನ್ನು ಹೊನ್ನನ್ನು ಹಣ್ಣಾದ ಫಲಗಳನು
ಕಣ್ಣಾರೆ ಕಂಡು ಮನದಲ್ಲಿ ಬಯಸದಿಹ
ಅಣ್ಣಗಳು ಯಾರು ಸರ್ವಜ್ಞ

ಚಾರಣಕವಿ ಸರ್ವಜ್ಞ ಹೀಗೆ ಹೇಳುತ್ತಾನೆ. ಹೌದು ಹೆಣ್ಣಿಗೆ ಗಂಡಾಸೆ, ಗಂಡಿಗೆ ಹೆಣ್ಣಾಸೆ ಅದು ಸಹಜ. ಆದರೆ ಈ ಆಸೆಯ ಈಡೇರಿಕೆಗಾಗಿ ಹೆಣ್ಣನ್ನು ತನ್ನ ಮುಷ್ಠಿಯಲ್ಲಿ ಇರಿಸಿಕೊಳ್ಳಲು ಮತ್ತು ಅವಳನ್ನು ಗೆಲ್ಲಬೇಕೆನ್ನುವ ಹಠದಿಂದ ಗಂಡು ಮಾಡುವ ಅನ್ಯಾಯಗಳು ಇಬ್ಬರ ನಡುವಿನ ಅನುಬಂಧ ಹಳಸಲು ಕಾರಣವಾಗುತ್ತಿದೆ. ಉಸಿರಾಡಿಸಬೇಕಿದ್ದ ಸಂಬಂಧಗಳು ಉಸಿರುಗಟ್ಟಿಸುವ ನೆಲೆಯನ್ನು ತಲುಪಿದ್ದು ಮಾನವ ಇತಿಹಾಸದ ಘನಘೋರ ವಿಫಲ.

ಆಫ್ರಿಕಾದಂತಹ ಬಡರಾಷ್ಟ್ರಗಳಲ್ಲಿ ಬಡತನದ ಬೆನ್ನು ಹತ್ತಿ ಬರುವುದು ಮೌಢ್ಯ. ಇವೆರಡಕ್ಕೂ ಅದೇನು ಅವಿನಾಭಾವ ಸಂಬಂಧವೋ ಕಾಣೆ. ಸೋಮಾಲಿಯಾದಂತಹ ಮರಳುಗಾಡಿನಲ್ಲಿ ಹುಟ್ಟಿ 'ವಾರಿಸ್' ಎಂದು ಅಲ್ಲಿನ ಅಪರೂಪದ ಹೂವಿನ ಹೆಸರನ್ನು ಇಟ್ಟುಕೊಂಡು ಜಗತ್ಪ್ರಸಿದ್ಧ ರೂಪದರ್ಶಿಯಾಗಿ ಖ್ಯಾತಿ ಹೊಂದಿ 'ವಾರಿಸ್ ಡಿರಿ' ಎಂಬ ಕಪ್ಪುಬಣ್ಣದ ಹೆಣ್ಣು ಮಗಳ ಹೃದಯ ವಿದ್ರಾವಕ ಹಾದಿಯನ್ನು ನೋಡಿದರೆ, ಈ ಎಲ್ಲಾ ಕಷ್ಟಗಳಿಗೂ ಕಾರಣರಾರು ಎಂಬುದನ್ನು ಹುಡುಕಬೇಕೆನಿಸುತ್ತದೆ. ಹಾಗೆ ಅದರ ಹಾದಿಗುಂಟ ಹುಡುಕುತ್ತಾ ಹೋದರೆ ನಮಗೆ ಸಿಗುವುದು 'ಪುರುಷ'ನೆಂಬ ಹೆಣ್ಣಿಗಿಂತಲೂ ಭಿನ್ನವಾದ ಶಾರೀರಿಕತೆಯನ್ನುಳ್ಳ ಒಂದು ಪ್ರಾಣಿ. ಈ ಮನುಷ್ಯ ಪ್ರಾಣಿಯು ದೈಹಿಕವಾಗಿ ಹೆಣ್ಣಿಗಿಂತಲೂ ಎಂದೂ ಕೈ ಮೇಲು. ಇಲ್ಲಿಂದ ಮೊದಲ್ಗೊಳ್ಳುವ ಈತನ ಕ್ರೌರ್ಯ ಹೆಣ್ಣಿನ ಬದುಕಿನುದ್ದಕ್ಕೂ ಮೂರ್ತ, ಅಮೂರ್ತ ರೂಪಗಳೆರಡರಲ್ಲೂ ಕಾಡುತ್ತಲೇ ಹೋಗುತ್ತದೆ. ನಿತ್ಯ ಬದುಕಿನಲ್ಲಿ ಹಲವಾರು ವಿಧಗಳಲ್ಲಿ ಹೆಣ್ಣನ್ನು ಶೋಷಿಸುವ ಈ ಗಂಡು 'ನಪುತಕಸ್ಯಂ ಗತಿನಾಕಸ್ತಿ' ಎನ್ನುತ್ತಾ ಅಮೂರ್ತ ಕಲ್ಪನೆಗಳಿಂದಲೂ ಆಕೆಯನ್ನು ಶೋಷಿಸುತ್ತಿರುವುದು ಕಂಡುಬರುತ್ತದೆ.

ಪ್ರಪಂಚದ ಪ್ರಸಿದ್ಧ ರೂಪದರ್ಶಿಯಾದ ವಾರಿಸ್‌ಡಿರಿ ಮುಖ್ಯವಾಗಿ ತನ್ನ ಬದುಕಿನುದ್ದಕ್ಕು ಹೋರಾಡಿದ್ದು 'ಯೋನಿ ವಿಚ್ಛೇಧನ'ವೆಂಬ ಅನಿಷ್ಠ ಪದ್ಧತಿಯ ವಿರುದ್ಧ. ಸ್ವತಃ ತಾನೇ ತನ್ನ ಬದುಕಿನಲ್ಲಿ ಇಂತಹ ಕ್ರಿಯೆಗೆ ಒಳಗಾದವಳು. ಗಂಡಿನ 'ಶ್ರೇಷ್ಠ

ಪವಿತ್ರ' ಎಂಬ ವ್ಯಸನಗಳಿಗೆ ಬಲಿಯಾದವಳು ಹೆಣ್ಣು. "ಹೆಣ್ಣು ಮಕ್ಕಳಿಗೆ ಋತುಮತಿಯಾಗುವ ಮುನ್ನ ಆಕೆಯ ಯೋನಿಯ ಹೊರಭಾಗದ ಕೆಲವು ಭಾಗ ಮತ್ತು ಗರ್ಭಾಶಯದ ಕೊರಳಿನ ತುದಿಯಲ್ಲಿರುವ ಅವರೆಕಾಳಿನ ಗಾತ್ರದ ಹಾಗೂ ಹೆಣ್ಣಿಗೆ ಲೈಂಗಿಕ ಸ್ಪರ್ಶ ಮತ್ತು ಸಂವೇದನೆಯ ಬಹುಮುಖ್ಯ ಭಾಗವಾಗಿರುವ ಭಾಗವನ್ನು ತೆಗೆದುಹಾಕಿ ಯೋನಿಯನ್ನು ಹೊಲಿಯುವ ಕ್ರಿಯೆ. ಇದನ್ನು ಇಂಗ್ಲೀಷ್ ಭಾಷೆಯಲ್ಲಿ CIR-CUMCISE ಎಂದು ಕರೆಯುತ್ತಾರೆ." ಈ ಕ್ರಿಯೆ ನಡೆದ ಮೇಲೆ ಶುರುವಾಗುತ್ತದೆ ಈ ಹೆಣ್ಣು ಮಕ್ಕಳ ನಿಜವಾದ ನರಕದ ಬದುಕು. ಕೆಲವು ದಿನಗಳ ಕಾಲ ಸರಿಯಾಗಿ ಕುಡಿಯಲು ನೀರನ್ನೂ ಕೊಡದೆ ಇವರನ್ನು ಇರಿಸಲಾಗುತ್ತದೆ. ಹೀಗೆ ಮಾಡುವುದರಿಂದ ನೋವು, ಸೋಂಕು ಮತ್ತು ರಕ್ತಸ್ರಾವದಿಂದ ಅದೆಷ್ಟೋ ಹೆಣ್ಣು ಮಕ್ಕಳು ಸಾವನ್ನಪ್ಪುತ್ತಿದ್ದುದೂ ಸಾಮಾನ್ಯವಾಗಿತ್ತು. ಅದೆಷ್ಟೋ ವರ್ಷ ಹಳೆಯ ಬ್ಲೇಡ್, ಕತ್ತರಿಗಳನ್ನು ಈ ಕ್ರಿಯೆಗಾಗಿ ಬಳಸುತ್ತಿದ್ದುದನ್ನು ಲೇಖಕರು ಇಲ್ಲಿ ಹೇಳುವುದನ್ನು ಗಮನಿಸುತ್ತೇವೆ.

ಹೀಗೆ ಮಾಡುವುದರಿಂದ, ಮುಂದಿನ ಅನೇಕ ವರ್ಷಗಳವರೆಗೆ ಅದು ಹಾಗೆಯೇ ಬಿಗಿಯಾಗುವುದರ ಮೂಲಕ ಯೋನಿಯು ಕೂಡಿಕೊಂಡು ಮದುವೆಯ ನಂತರ ಮೊದಲ ರಾತ್ರಿಯಲ್ಲಿಯೋ ಅಥವಾ ಮಕ್ಕಳನ್ನು ಹೆರಲಾರದೆಯೋ ಅನೇಕ ಮಂದಿ ಹೆಣ್ಣುಮಕ್ಕಳು ತಮ್ಮ ಬದುಕನ್ನು ಕೊನೆಯಾಗಿಸಿಕೊಳ್ಳುತ್ತಿದ್ದುದೂ ಸಹ ಉಂಟು. ತಾನು ಶಾರೀರಿಕವಾಗಿ ಕೂಡಬೇಕೆಂದಿರುವ ಹೆಣ್ಣು ತನಗೂ ಮುಂಚಿತವಾಗಿ ಯಾವ ಗಂಡಸನ್ನಾದರೂ ತಾಕಿಬಿಡುವಳೇನೋ ಎಂಬ ಅನುಮಾನದಿಂದ ಗಂಡು ಹೂಡಿದ ತಂತ್ರವಿದು. ಇದನ್ನು ಮುಂದುವರಿಸಲು ಮದುವೆಯ ಸಮಯದಲ್ಲಿ ಹೆಣ್ಣಿನ ತಂದೆಗೆ ನೀಡುತ್ತಿದ್ದ ವಧುದಕ್ಷಿಣೆ. ಮುಖ್ಯವಾಗಿ ಒಂಟೆಗಳು. ಮರಳುಗಾಡಿನ ಬದುಕಿಗೆ ಬಹುಮುಖ್ಯವಾದ ಒಂಟೆಗಳ ಆಮಿಷ, ಅದರ ಜೊತೆಗೆ ಹಣ, ಒಡವೆಗಳು ಮುಂತಾದವು ಗಂಡಿನ ಆಸೆಯ ಕಣ್ಣನ್ನು ದೊಡ್ಡದು ಮಾಡುತ್ತವೆ. ಈ ಆಸೆಯ ಗಾಳಕ್ಕೆ ಬಲಿಯಾಗುವುದು ಮಾತ್ರ ಹೆಣ್ಣು. ವಾರಿಸ್‌ಳ ಅಪ್ಪ ಒಮ್ಮೆ ಒಬ್ಬ ಮುದುಕನನ್ನು ಕರೆತಂದು ಅವನನ್ನು ನೋಡುವಂತೆ ಹೇಳುತ್ತಾನೆ. ಮರುದಿವಸ ಅವಳ ಬಳಿ ಆತ ನಿನ್ನನ್ನು ಮದುವೆಯಾಗಲು ಒಪ್ಪಿದ್ದಾನೆ ಎಂದು ಹೇಳಿದಾಗ ಆಕೆ ನಯವಾಗಿ ತಿರಸ್ಕರಿಸುತ್ತಾಳೆ. ಅದರಿಂದ ಕೋಪಗೊಂಡ ಆತ ನೀನು ಈ ಮದುವೆಯಾದರೆ ನನಗೆ ಆತ ಐದು ಒಂಟೆಗಳನ್ನು ಕೊಡುತ್ತಾನೆ ಎಂದು ಹೇಳುತ್ತಾನೆ. ಆಕೆ ಆಗಲೂ ತಿರಸ್ಕರಿಸಿದಾಗ ಅವಳನ್ನು ಹೊಡೆದು ಆತ ತನ್ನ ಕೋಪವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಅವನು ತಂದೆಯಾದರೂ ಬೇರೆಯವನಾದರೂ ಗಂಡು ಗಂಡಿನ ಹಾಗೆಯೇ ಯೋಚಿಸುತ್ತಾನೆ ಎಂದು ತೀರ್ಮಾನಿಸಿದ ವಾರಿಸ್ ಮನೆ ಬಿಟ್ಟುಬರುತ್ತಾಳೆ. ದಾರಿಯಲ್ಲಿ ತನಗೆ ಎದುರಾಗುವ ಕಾರಿನಲ್ಲಿ ಬಂದ ತನ್ನ ತಂದೆಯ ವಯಸ್ಸಿನ ಮುದುಕನೊಬ್ಬನನ್ನು ಬಿಟ್ಟರೆ ಉಳಿದವರೆಲ್ಲರೂ ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದ್ದು, ಹೆಣ್ಣೊಬ್ಬಳ ಅಸಹಾಯಕ ಸ್ಥಿತಿಯನ್ನು ಶರೀರದಲ್ಲಿ ತ್ರಾಣವಿರುವ ಪ್ರತಿಯೊಬ್ಬ ಗಂಡಸೂ ಲೈಂಗಿಕವಾಗಿ ಬಯಸುತ್ತಾನೆ ಎಂಬುದನ್ನು ತೋರುತ್ತದೆ.

ಪ್ರಾಚೀನ ಮಾನವ ಇತಿಹಾಸದಲ್ಲಿ ಕೆಲವು ಕಾಣಿಸುವ ಲೋಹದ ಕವಚಗಳು, ಹೆಣ್ಣಿನ ಶರೀರಕ್ಕೆ ತೊಸಿಸಿ ಅವಳನ್ನು ಇತರರಿಂದ ಬೇರ್ಪಡಿಸುವ ಉದ್ದೇಶ, ಗಂಡು ಸತ್ತ ನಂತರವೂ ತನ್ನವಳೆನಿಸಿದ ಹೆಣ್ಣು ಅನ್ಯರನ್ನು ಕೂಡಿ ಬಾಳಬಾರದು ಎಂದು ಸತೀಸಹಗಮನವನ್ನು ಜಾರಿಗೆ ತಂದುದು, ಯೋನಿ ವಿಚ್ಛೇದನ ಇವೆಲ್ಲವೂ ಮನುಷ್ಯಳೊಬ್ಬಳನ್ನು ಒಂದು ಪ್ರಾಣಿಯಂತೆ ಭಾವಿಸುವ ಮತ್ತು ಅವಳನ್ನು 'ಪರಿಶುದ್ಧ'ಳು ಎನ್ನುವ ಕಲ್ಪನೆಯಡಿ ಸದಾ ಹುರಿದು ತಿನ್ನುವ ವ್ಯವಸ್ಥೆಯನ್ನು ಗಂಡು ವ್ಯವಸ್ಥಿತವಾಗಿ ಕಟ್ಟುತ್ತಾ ಬಂದಿದ್ದಾನೆ. ಒಂದು ಕಾಲದಲ್ಲಿ ಪ್ರಚಲಿತವಿದ್ದ **'ಕೂಡಿಕೆ'** ಪದ್ಧತಿಯು ಹೆಣ್ಣಿನ ವೈಯಕ್ತಿಕ ಜೀವನದ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಅಬ್ರಾಹ್ಮಣರಲ್ಲಿ ಮತ್ತು ಕೆಲವು ಬುಡಕಟ್ಟುಗಳಲ್ಲಿ ಇಂದಿಗೂ ಈ ಪದ್ಧತಿ ಚಾಲ್ತಿಯಲ್ಲಿರುವುದು ಕಾಣುತ್ತದೆ. ಆದರೆ ಶ್ರೇಷ್ಠವೆಂದು ಕರೆದುಕೊಂಡ ಯಾವುದೋ ಒಂದು ಸಮುದಾಯವನ್ನೋ, ಆಚರಣೆಯನ್ನೋ ಅನುಸರಿಸಲು ಹೋಗಿ ಸಮಾಜವು ಇಂದು ಈ ಸ್ಥಿತಿಗೆ ಬಂದು ನಿಂತಿದೆ. ವಾರಿಸ್ ತನ್ನ ಬಂಧುಗಳ ಮನೆಯಲ್ಲಿ ಕೆಲಸದ ಆಳಾಗಿ ದುಡಿದು, ಅಲ್ಲಿಂದ ತಪ್ಪಿಸಿಕೊಂಡು ಸ್ನೇಹಿತೆಯ ಸಹಾಯದಿಂದ ತಾನು ಒಂದು ನೆಲೆಕಂಡುಕೊಳ್ಳಲು ಹೆಣಗುವ ಪರಿಯು ನಮಗೆ ಕಣ್ಣೀರು ಬರಿಸುತ್ತದೆ. ತನ್ನ ಛಲದಿಂದ ಇಂದು ಪ್ರಪಂಚ ಪ್ರಸಿದ್ಧವಾದ ಆಕೆ ಆಫ್ರಿಕಾದ ಹೆಣ್ಣು ಮಕ್ಕಳನ್ನು ಯೋನಿ ವಿಚ್ಛೇದನದಿಂದ ಹೊರತರಲು ತನ್ನ ಬದುಕನ್ನು ಮುಡುಪಾಗಿಟ್ಟಿದ್ದಾಳೆ.

**ಉಪಸಂಹಾರ**

ವಾರಿಸ್ ಎಂಬ ಮಹಿಳೆ ಇಂದು ನಮಗೆ ರೂಪದರ್ಶಿಯಾಗಿ ಮನಸೆಳೆವ ಹೂವಿನಂತೆ ಕಂಡುಬರುತ್ತಿದ್ದರೂ ಅದರ ಹಿಂದೆ ಮುಳ್ಳಿನ ಹಾದಿ ಇದ್ದೇ ಇದೆ. ಹೆಣ್ಣೊಂದು ಕಲಿತರೆ ಶಾಲೆಯೊಂದಿ ತೆರೆದಂತೆ ಎನ್ನುವ ಹಾಗೆ ತನ್ನ ಸಂಕೋಲೆಗಳಿಂದ ಹೊರಬಂದ ವಾರಿಸ್ ಇನ್ನಿತರರ ಬಿಡುಗಡೆಗೆ ದುಡಿಯುತ್ತಿರುವುದು ಅನುಕರಣೀಯ. ಆಪರೇಷನ್ ಮಾಡಬೇಕಾದ ಆಸ್ಪತ್ರೆಯಲ್ಲಿ ಸೋಮಾಲಿಯನ್ ವ್ಯಕ್ತಿ ಡಾಕ್ಟರ್ ಎದುರಿಗೇ ಇವಳನ್ನು ಆಪರೇಷನ್ ಮಾಡಿಸದಂತೆ ಮೆಲ್ಲಗೆ ಗದುರುವುದು, ನೀನು ನಿಮ್ಮ ಸಂಸ್ಕೃತಿಗೆ ಅಪಚಾರ ಮಾಡುತ್ತಿರುವೆ ಎನ್ನುವ ವಿಷಯವು ನಮ್ಮನ್ನು ಕಾಡುತ್ತದೆ. ಆಕೆಯ ಅಷ್ಟು ನೋವು, ಹಿಂಸೆಗಳಿಂದ ಸಾಯುವಾಗಲೂ ಗಂಡು ಸಂಸ್ಕೃತಿ ಎನ್ನುವ ಹೆಸರಿನಲ್ಲಿ ಆಕೆಯನ್ನು ಮತ್ತೆ ಮತ್ತೆ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಬಯಸುವುದು ಆತನ ಕ್ರೌರ್ಯವನ್ನು ತೋರಿಸುತ್ತದೆ. ಹೀಗೆ ಪುರುಷ ಯಜಮಾನಿಕೆಯ ಬಲೆಯಲ್ಲಿ ಸಿಲುಕಿದ ಹೆಣ್ಣು ಮಕ್ಕಳೆಷ್ಟೋ ಇಂದಿಗೂ ತಮ್ಮನ್ನು ತಾವೇ ಕೊನೆಗಾಣಿಸಿಕೊಳ್ಳುತ್ತಿರುವುದು ಈ ಸಮಾಜಕ್ಕೆ ಅಂಟಿದ ಅತ್ಯಂತ ದಾರುಣವಾದ ಅನಿಷ್ಟವಾಗಿದೆ. ಇದು ತೊಲಗಿ, ಹೆಣ್ಣುಗಂಡುಗಳು ಸಮಾನವಾಗಿ ಬದುಕುವಂತಾದರೆ ಈ ಸಮಾಜ ಇನ್ನಷ್ಟು ಸುಂದರವಾಗುತ್ತದೆ.

**ಪರಾಮರ್ಶನ ಗ್ರಂಥಗಳು**

1. ಮರುಭೂಮಿಯ ಹೂ, ಅನು: ಎನ್. ಜಗದೀಶ್ ಕೊಪ್ಪ, ಮನೋಹರ ಗ್ರಂಥಮಾಲಾ, ಧಾರವಾಡ, ಆರನೆಯ ಮುದ್ರಣ–2024
2. ಸಾರಾ ಶಗುಫ್ತಾ, ಅನು: ಹಸನ್ ನಯೀಂ ಸುರಕೋಡ, ಇಳಾ ಮುದ್ರಣ, ಬೆಂಗಳೂರು, ಮೊದಲ ಮುದ್ರಣ–2016
3. ದ ಸೆಕೆಂಡ್ ಸೆಕ್ಸ್, ಅನು: ಎಚ್.ಎಸ್. ಶ್ರೀಮತಿ, ಸಂಕಥನ ಪ್ರಕಾಶನ, ಮಂಡ್ಯ (ಸಂಪುಟ–3), ಮೊದಲ ಮುದ್ರಣ–2020
4. ಉರಿಯ ನೆಳಲು, ಅನು: ಬಿ. ಸುಜ್ಞಾನ ಮೂರ್ತಿ, ಲಡಾಯಿ ಪ್ರಕಾಶನ, ಗದಗ, ಮೊದಲ ಮುದ್ರಣ–2018

**Citation:** Dr. MUNIRAJA. A. 2025. “ಮರುಭೂಮಿಯ ಹೂವು – ಮಹಿಳೆಯ ನೋವು”. International Journal of Academic Research, 12(3): 109-111.
**Copyright:** ©2025 Dr. MUNIRAJA. A. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.